

ಪರಿಹಾರ ವಸ್ತುಗಳ ವಿತರಣೆ

ಪರಿಸರ ಪ್ರದೇಶದಲ್ಲಿ ಗುರುತಿಸಲಾಗಿತ್ತು. ಅದರ ವಿರುದ್ಧ ತಕರಾರು ಎತ್ತಿದ ರಾಜ್ಯ ಸರ್ಕಾರ, ಕೇವಲ 153 ಗ್ರಾಮಗಳನ್ನು ಮಾತ್ರವೇ ಈ ವಲಯಕ್ಕೆ ಸೇರಿಸಲು ಸಮ್ಮತಿಸಿತು. ಈ ಗ್ರಾಮಗಳು ಈಗಾಗಲೇ ರಕ್ಷಿತ ಅರಣ್ಯ ಅಥವಾ ರಾಷ್ಟ್ರೀಯ ಉದ್ಯಾನಗಳ ವ್ಯಾಪ್ತಿಯಲ್ಲಿದ್ದು, ಅವುಗಳಿಗೆ ಅರಣ್ಯ ಕಾಯ್ದೆ ಅನ್ವಯವಾಗುತ್ತಿದೆ. ಉಳಿದ ಗ್ರಾಮಗಳನ್ನು ಪರಿಸರ ಸೂಕ್ಷ್ಮ ಪ್ರದೇಶಕ್ಕೆ ಸೇರಿಸಬಾರದು ಎನ್ನುವುದು ರಾಜ್ಯ ಸರ್ಕಾರದ ಆಕ್ಷೇಪವಾಗಿದೆ.

ರಾಜ್ಯ ಸರ್ಕಾರದ ವಾದ ಸರಣಿ ಹೀಗಿದೆ: 'ಮಾನವ ನಿರ್ಮಿತ ಅರಣ್ಯ ಮತ್ತು ನೈಸರ್ಗಿಕ ಅರಣ್ಯ ಎಂಬ ವರ್ಗೀಕರಣವೇ ಸರಿಯಲ್ಲ. ಅರಣ್ಯ ಕಾಯ್ದೆ ಜಾರಿಯಲ್ಲಿರುವ ಸಂರಕ್ಷಿತ ಪ್ರದೇಶ, ಮೀಸಲು ಅರಣ್ಯ, ವನ್ಯಜೀವಿ ಅಭಯಾರಣ್ಯ ಹಾಗೂ ರಾಷ್ಟ್ರೀಯ ಅಭಯಾರಣ್ಯಗಳನ್ನು ಸೂಕ್ಷ್ಮ ಪರಿಸರ ವಲಯಕ್ಕೆ ಸೇರಿಸಬಹುದು. ಕಸ್ತೂರಿರಂಗನ್ ಸಮಿತಿಯು ಸರಿಯಾದ ಮಾನದಂಡವನ್ನು ಅನುಸರಿಸದ ಕಾರಣದಿಂದ ಶೇಕಡಾ 80ರಷ್ಟು ಮಾನವ ನಿರ್ಮಿತ ಅರಣ್ಯ ಹೊಂದಿರುವ ಪ್ರದೇಶವೂ ಸೂಕ್ಷ್ಮ ಪರಿಸರ ವಲಯಕ್ಕೆ ಸೇರಿದೆ. ಇದಕ್ಕೆ ಈ ಪ್ರದೇಶದಲ್ಲಿ ವಾಸಿಸುವ ಜನರ ವಿರೋಧವಿದೆ.'

'ಸೂಕ್ಷ್ಮ ಪರಿಸರ ಪ್ರದೇಶದಲ್ಲಿ ಈಗಾಗಲೇ ವಿದ್ಯುತ್ ಉತ್ಪಾದನಾ ಘಟಕಗಳು ಕೆಲಸ ಮಾಡುತ್ತಿವೆ. ಇವುಗಳ ವಿಸ್ತರಣೆಗೆ ಮುಂದಿನ ದಿನಗಳಲ್ಲಿ ಯಾವುದೇ ಅಡೆತಡೆ ಇರಬಾರದು. ಅದೂ ಅಲ್ಲದೆ, ಈ ಪ್ರದೇಶದಲ್ಲಿ ಅನೇಕ ಧಾರ್ಮಿಕ ಪ್ರವಾಸಿ ತಾಣಗಳಿವೆ. ಇವುಗಳಲ್ಲಿ ವರ್ಷದ ಅನೇಕ ದಿನಗಳ ಕಾಲ ಧಾರ್ಮಿಕ ಆಚರಣೆ ನಡೆಯುತ್ತಿರುತ್ತದೆ. ಇವುಗಳ ಮೇಲೆ ನಿಯಂತ್ರಣ ವಿಧಿಸಬಹುದಾದರೂ ಆ ಚಟುವಟಿಕೆಗಳನ್ನು ನಡೆಸದಂತೆ ನಿರ್ಬಂಧ ಹೇರಬಾರದು. ಮಾತ್ರವಲ್ಲ, ಈ ಪ್ರದೇಶದಲ್ಲಿ ಪರಿಸರ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಬೇಕು' ಎನ್ನುವುದು ರಾಜ್ಯ ಸರ್ಕಾರದ ವಾದ.

ರಾಜ್ಯದ ಬೆಳಗಾವಿ, ಚಿಕ್ಕಮಗಳೂರು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗ, ಉಡುಪಿ, ಮೈಸೂರು, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಯ ನೂರಾರು ಹಳ್ಳಿಗಳು ಪಶ್ಚಿಮ ಘಟ್ಟದ ವ್ಯಾಪ್ತಿಗೆ ಬರುತ್ತವೆ. ಅಲ್ಲಿನ ಜನರಿಗೆ ವರದಿಯ ಬಗ್ಗೆ ತಿಳಿ ಹೇಳುವ ಯಾವ ಯತ್ನವನ್ನೂ ಅರಣ್ಯ ಇಲಾಖೆ ಮಾಡಲಿಲ್ಲ.

ಈ ಎರಡೂ ವರದಿಗಳ ಪರವಾಗಿ ಹಲವಾರು ಪರಿಸರ ಹೋರಾಟಗಾರರು ಧ್ವನಿ ಎತ್ತಿದ್ದಾರೆ. 'ಸಣ್ಣ ಗುತ್ತಿಗೆದಾರರೇ ಸ್ಥಳೀಯ ರಾಜಕಾರಣಿಗಳಿಗೆ ಹಣದ ಮೂಲ. ರಸ್ತೆ ನಿರ್ಮಾಣ, ಪೈಪ್‌ಲೈನ್ ಕಾಮಗಾರಿ, ವಿದ್ಯುತ್ ತಂತಿ ಅಳವಡಿಕೆಯಂತಹ ಅಭಿವೃದ್ಧಿ ಕಾಮಗಾರಿಗೆ ವರದಿ ಅಡ್ಡಿಯಾಗುತ್ತದೆ ಎನ್ನುವ ಆತಂಕದಿಂದ ಘಟ್ಟದ ಎಲ್ಲಾ ಜಿಲ್ಲೆಗಳಲ್ಲಿ ವಿರೋಧ ಬಂತು. ಕಾಡಿನಂಚಿನ ಹಳ್ಳಿಗಳಲ್ಲಿ ಜೆಸಿಬಿ ಓಡಾಡಿದರೆ ಹಣ ಹರಿದಾಡುತ್ತದೆ. ಎಲ್ಲಾ ಪಕ್ಷಗಳ ಹಿಂಬಾಲಕರು ಈ ರೀತಿಯ ಗುತ್ತಿಗೆದಾರರೇ ಆಗಿದ್ದಾರೆ. ಇವರಿಗೆ ಕೆಲಸ ಕೊಡಿಸುವುದು ಎಂದರೆ ತಮ್ಮ ಹಿಂಬಾಲಕರಿಗೆ ಪುಡಾರಿಗಳು ಉಡುಗೊರೆ ನೀಡಿದಂತೆ' ಎಂದು ಪರಿಸರವಾದಿ ಸಂಘಟನೆಗಳು ಹೇಳುತ್ತಿವೆ.

ಘಟ್ಟ ಪ್ರದೇಶದಲ್ಲಿ ಕಸ್ತೂರಿರಂಗನ್ ವರದಿಯ ವಿರುದ್ಧ ಪ್ರತಿಭಟನೆ ನಡೆಯಲು ಮರ ಕಳ್ಳಸಾಗಾಣಿಕೆ ಲಾಬಿಯೇ ಮುಖ್ಯ ಕಾರಣ ಎನ್ನುವವರೂ ಇದ್ದಾರೆ. 'ಪಕ್ಷಾತೀತವಾಗಿ ಇಲ್ಲಿಯ ರಾಜಕಾರಣಿಗಳಿಗೆ ಮರದ ವ್ಯಾಪಾರಿಗಳ ಮೇಲೆ ಎಲ್ಲಿಲ್ಲದ ಪ್ರೀತಿಯಿದೆ. ಇದರ ಫಲವಾಗಿ ರಾಜಕಾರಣಿಗಳ ಆದಾಯ ವರ್ಷದಿಂದ ವರ್ಷಕ್ಕೆ ಏರುತ್ತಿದೆ. ವರದಿಯ ವಿರುದ್ಧ ಇವರು ಸ್ಥಳೀಯ ಜನರನ್ನು ಎತ್ತಿ ಕಟ್ಟಿದ್ದಾರೆ' ಎನ್ನುವುದು ಪರಿಸರಪ್ರೇಮಿಗಳ ಆರೋಪ.

'1994ರಲ್ಲಿ ಕಾಫಿಯ ಮೇಲಿನ ನಿಯಂತ್ರಣ ತೆರವಾದ ನಂತರ ಕೊಡಗು ಜಿಲ್ಲೆಯಲ್ಲಿ ಇಳುವರಿ 60 ಸಾವಿರ ಟನ್‌ನಿಂದ 1.3 ಲಕ್ಷ ಟನ್‌ಗೆ ಏರಿದೆ. ಉತ್ತಮ ಇಳುವರಿ ತರುವ ಗಿಡ ಮತ್ತು ತೋಟ ವಿಸ್ತರಣೆ ಇದಕ್ಕೆ ಕಾರಣ. ಇಲ್ಲಿ ದೇವರಕಾಡು ಕೂಡಾ ಮೂಲಸ್ವರೂಪವನ್ನು ಕಳೆದುಕೊಂಡಿದೆ. ಎರಡು ರಾಜ್ಯಗಳ ಜೀವನಾಡಿ ಎನ್ನುವ ಕಾವೇರಿಯಲ್ಲಿ ನೀರಿನ ಪ್ರಮಾಣವೂ ಕಡಿಮೆಯಾಗಿದೆ. ಇಂತಹ ಕಟುಸತ್ಯ ಕಣ್ಣಮುಂದೆ ಇರುವಾಗ ಕಸ್ತೂರಿರಂಗನ್ ವರದಿಯನ್ನು ಜಾರಿ ಮಾಡದಿರುವುದು ಸರಿಯಲ್ಲ' ಎನ್ನುತ್ತಾರೆ ಪರಿಸರವಾದಿಗಳು.

ಆದರೆ ಅವರ ಮಾತುಗಳನ್ನು ಕೇಳಲು ಸರಕಾರವಾಗಲೀ, ರಾಜಕಾರಣಿಗಳಾಗಲೀ ಸಿದ್ಧರಿಲ್ಲ.




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ



ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು-18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450